ಗಳ್ಗೆಲಾದ್ರೂ ನನ್ನ ನೆಪ್ಪಾಗಿ ಓಡಿ ಬತ್ತೀಯಾ ಅಂತ ಕಾಯ್ತನೇ ಇದ್ದೆ ಬಸ್ವಾ. ನೀನು ಬರ್ಲೇ ಇಲ್ಲ. ನಾನು ಯಾಕೆ ಬದುಕಿರ ಬ್ಯಾಕು ಯೋಳು ಬಸ್ವಾ, ಅದಕ್ಕೆ ನಾನು ವಿಸ ತಗಂಡಿದಿನಿ. ನೀನು ಸಂದಾಗಿರು, ತಗೋ ನಿನ್ನ ಮಗೀನಾ'' ಅಂದವ್ಳೆ ಮಗುನಾ ಬಸ್ವನ ಕೈಗಿಟ್ಟು ಕೆಳಗೆ ಬಿದ್ದು ಬಿಟ್ಟಳು. ಬಸ್ವ "ಮಾದೇವಿ, ಮಾದೇವಿ ಏನಾಯ್ತೆ" ಅಂತ ಅವಳ್ನ ಹಿಡ್ಕಂಡು ಅಲ್ಲಾಡಸ್ದ. ಅಟೋತ್ತಿಗಾಗ್ಲೆ ಅವಳ ಪಿರಾಣ ವೊಂಟೊಗಿತ್ತು. ಮಾದೇವಿ ಅಣ್ಣ, ತಂಗಿ ಹೆಣವಾಗಿರೋದ್ನ ನೋಡಿ ರೋಷಗೊಂಡವ್ನೆ ಸರ ಸರ ಅಂತ ಬಂದವನೆ ಮಾದೇವಿ ಹೆಣ ಹಿಡ್ಕೊಂಡು ಅಳ್ತ ಇದ್ದ ಬಸ್ವನ ತಲೆನಾ ಕಚಕ್ ಅಂತ ಕತ್ತರಿಸಿಯೆ ಬಿಟ್ಟ. ಒಂದೆ ಕ್ಷಣದಲಿ ಮತ್ತೊಂದು ಹೆಣ ಬಿತ್ತು. ಒಂದಾದ ಮೇಲೆ ಒಂದು ಹೆಣ ಬೀಳೋದ್ನ ನೋಡಿ ಜನ ದಂಗು ಬಡಿದು ಹೋಗಿದ್ರು. ಮನೆಯವ್ರ ಅಳು ಕಿರುಚಾಟದ ನಡುವೆ ತಾನೇನು ಮಾಡಬೇಕೊ ಅಂತ ತಿಳಿಯದೆ ದಿಗ್ಭ್ರಾಂತಳಾಗಿ ನಿಂತು ಬಿಟ್ಟಿದ್ದಳು ಸಣ್ಣಿ. ಮಗು ತನ್ನ ಹೆತ್ತವರ ಹೆಣದ ನಡುವೆ ಎದೆ ಬಿರಿಯುವಂತೆ ಅಳುವ ಸದ್ದಿನಿಂದ ಸಣ್ಣಿ ಎಚ್ಚೆತ್ತವಳೆ ಅತ್ತ ಧಾವಿಸಿದಳು. ಅಪ್ಪ, ಅವ್ವ ಇಬ್ರನ್ನು ಒಂದೇ ಸಾರಿ ಕಳ್ಕೊಂಡು ಅನಾಥ್ವಾಗಿ ಬಿದ್ದು ಅಳ್ತಿದ್ದ ಮಗಿನಾ ನೋಡಿ ವೊಟ್ಟೆ ಉರ್ಕಂಡು ಎತ್ತಿಕೊಂಡಳು. "ಮುಟ್ಯಾಡಾ, ಆ ಅನಿಷ್ಟನಾ, ವಲ್ತಿ ವೊಟ್ಟೆಲಿ ವುಟ್ಟಿದ ಪಿಂಡಾ ಅದು. ನನ್ಮನೆ ಸರ್ವ ನಾಸ ಮಾಡೋಕೆ ಅಂತನೆ ವುಟ್ಟೈತೆ. ಅವಳ ಸವಸಾ ಬ್ಯಾಡಾ ಬ್ಯಾಡಾ ಅದ್ರೂ ಕೇಳ್ಲಿಲ್ಲ. ಕೊನ್ಗೂ ಅವನ್ಬಲಿ ತಗೊಂಡೆ ಬುಟ್ಟಳು" ಬಸ್ವನ ಅವ್ವ ಜೋರಾಗಿ ಅಳ್ತನೆ ಕೂಗಿದ್ಲು. "ದೊಡ್ಡೋರು ಮಾಡ್ದ ಪಾಪಕ್ಕೆ ಈ ಮಗೀನ್ಯಾಕೆ ಅಂತಿರವ್ವ, ಹಸ್ಗೂಸು ಅದ್ಕೇನು ತಿಳ್ಯುತ್ತೆ, ಎಲ್ರೊಗುತ್ತೆ ಇದು ಪಾಪ. ಇನ್ನ ಮ್ಯಾಕೆ ಇದು ಇಲ್ಲೆ ಇರುತ್ತೆ. ಇದಕ್ಕೆ ನಾನೆ ಅವ್ವ ಅಪ್ಪ ಎಲ್ಲಾ" ಅಂತ ಏಳ್ತಾ ಬಾಗಿಲ ಬಳಿ ತಾನು ಒದ್ದು ಒಳಿಕೆ ಬರ್ಬೇಕಂತ ಇಟ್ಟಿದ್ದ ಅಕ್ಕಿ ತುಂಬಿದ ಸೇರನ್ನೆ ವಿಷಾದದಿಂದ ನೋಡಿ ಒಳ ಬಂದು ಅತ್ತಿತ್ತ ನೋಡಿ ಅಲ್ಲಿಯೆ ಗಂಡು ಹೆಣ್ಣಿಗೆ ಕುಡಿಯಾಕೆ ಅಂತ ಇಟ್ಟಿದ್ದ ಹಾಲನ್ನು ತಗಂಡು ಮಗಿಗೆ ಕುಡ್ಸಿ ಎದೆಗೊತ್ತಿಕೊಂಡಳು.

ಮಗೀನ ನೋಡ್ಕತಾ ಇದ್ದ ಸಣ್ಣಿನಾ ಮನ್ಯವರೆಲ್ಲಾ ಚುಚ್ಚೋಕೆ ಶುರುಚ್ಕಂಡ್ರು. ಲಗ್ನಾದ ದಿನವೇ ಗಂಡನ್ನ ಕಳ್ಕೊಂಡು ತಮ್ಗೆ ಬ್ಯಾಡ್ವಾದ ಹಾದ್ರಕ್ಕುಟ್ದ ಮಗೀನ ಅದೂ ವಲ್ತಿ ಎತ್ತ ಮಗೀನಾ ಮನ್ಯೊಳ್ಗೆ ತಂದಿಟ್ಕಂಡಿದ್ದು ಅವರ್ಗೆಲ್ಲ ಸರ್ಕಾಣ್ಲಿಲ್ಲ. ಮಗೀನಾ ಇಟ್ಕೊಳ್ಳೊದಿದ್ರೆ ನೀನೂ ಈ



ಮನ್ಯಾಗಿರ್ಬಾರದು. ನಿನ್ನ ತೌರ್ಮನ್ಯಾಗೆ ವೊಂಟೋಗಿ ಅಲ್ಲೆ ಈ ಅನಿಷ್ಟವ ಸಾಕ್ಕೊ ಅಂತ ಕಡಾಕಂಡಿತ್ವಾಗಿ ಯೋಳಿಬಿಟ್ಟಾಗ ಸಣ್ಣಿಗೆ ದಿಕ್ಕೆ ತೋಚ್ದಂಗಾತು. ತಾನ್ಮಾಡ್ದ ಪಾಪಕ್ಕೆ ಇದು ಸಿಕ್ಸೆ ತಾನೆ ಅಂತ ಅಂದ್ಕತಾ ಯಾವ ಸಂಬಂಧ ಐತೆ ಅಂತ ತಾನಿಲ್ಲಿರ್ಬೇಕು, ತಾಳಿ ಕಟ್ದ ಗಂಡನೆ ಇಲ್ಲ ಅಂದ ಮ್ಯಾಕೆ ತಾನಾದ್ರೂ ಯಾಕಿಲ್ಲಿರ್ಬೇಕು, ದುಡ್ಕಂಡು ತಿನ್ನಾಕೆ ಎಲ್ಲಿದ್ರೆನು ಅಂತ ಯೋಚ್ನೆ ಮಾಡುದ್ಲು. ಆವತ್ತು ಅಪ್ಪಂಗಾಗಿ ಗೊತ್ತಾದ್ಮೆದ್ವೆನಾ ಮುರ್ಕಂಡೆ, ಅದೇ ಶಾಪ ನಂಗೆ ತಟ್ಟೈತೆ. ಈಗ ಯಾವ್ಮುಖ ಹೊತ್ಕಂಡು ಅಪ್ಪನ ಅಟ್ಟಿಗೊಗ್ಲಿ. ಅವ್ವಂಗೂ, ಆ ಕುಡ್ಕ ಅಣ್ಣೆರ್ಗೂ ನನ್ನ ಮ್ಯಾಕೆ ಶಾನೆ ಕ್ವಾಪ ಐತೇ. ಅಂತದ್ರಾಗೆ ನಾನು ಈ ಮಗೀನಾ ಕರ್ಕೊಂಡು ಅಲ್ಗೆ ವೋಗಾಕಾಯ್ತದಾ. ಅಂಗಾದ್ರೆ ಎತ್ಲಾಗೋಗ್ಲಿ... ಚೆಂತ್ಯಾಗೆ ರಾತ್ರಿನಾ ಕಳ್ದು ವತ್ತಾರಿಕೆ ಬ್ಯಾಗೆದ್ದು ತನ್ಚೀಲನ ತಗೊಂಡು ಮಗೀನೂ ಎತ್ಕಂಡು ಯ್ಯಾರ್ಗೂ ಏಳ್ದೆ ವೊಂಟು ಬಿಟ್ಳು. ಜೀವ ಕೈಲಿಟ್ಕಂಡು ತಾನು ಮದ್ವೆ ಮುರ್ದು ಅವ್ಮಾನ